ವ್ಯಕ್ತವಾಯಿತು.

ಕೃಷ್ಣಪ್ಪರ ವಿಚಾರಣೆಯ ನಂತರ ಸಾಕ್ಷಿದಾರಳಾದ ಸಾವಿತ್ರಿಗೆ ಬರ ಹೇಳಿದಾಗ ಹುಡುಗಿಯೂ ಒಳ ಬಂದಳು. ಹೊರಗಿರಲು ಹೇಳಿದರೂ ಆಕೆ ಇಣುಕಿ ನೋಡುತ್ತಿರುವುದು ಬಾಗಿಲ ಸಂದಿಯಲ್ಲಿ ಕಾಣಿಸುತ್ತಿತ್ತು. ಕೃಷ್ಣಪ್ಪ ಮತ್ತು ತನಿಖಾಧಿಕಾರಿಯನ್ನು ಬಿಟ್ಟರೆ ಇತರರು ಸಾವಿತ್ರಿಯನ್ನು ನೋಡಿರಲಿಲ್ಲ. ಬಣ್ಣಗೆಟ್ಟ ಹಳೆಯ ಕಾಟನ್ ಸೀರೆ ಉಟ್ಟಿದ್ದರೂ ಉಬ್ಬು ತಗ್ಗುಗಳು ಕಣ್ಣು ಕುಕ್ಕುತ್ತಿದ್ದವು. ಒಳ್ಳೇ ಪಾರ್ಟಿ ನೋಡಿ ಕೃಷ್ಣಪ್ಪ ಹಸು ಸಾಲ ಕೊಟ್ಟಿದ್ದಾರೆ ಎನ್ನುವಂತಿತ್ತು ಅಲ್ಲಿದ್ದವರ ಮುಖಭಾವ. ಸಾವಿತ್ರಿ ದೇಹದ ತುಂಬಾ ಕಣ್ಣುಗಳು ಹರಿದಾಡುವುದು ಅರಿವಿಗೆ ಬಂದು ಸೆರಗನ್ನು ಎಳೆದೆಳೆದು ಮುಚ್ಚಿಕೊಳ್ಳಲು ಯತ್ನಿಸುತ್ತಿದ್ದಳು. ಸುಮಾರು ಅರ್ಧ ತಾಸು ನಡೆದ ಪ್ರಶ್ನೋತ್ತರದಲ್ಲಿ ವಿಚಾರಣೆಗಿಂತ ಹೆಚ್ಚಾಗಿ ಸಾವಿತ್ರಿ ಮತ್ತು ಕೃಷ್ಣಪ್ಪರ ಸಂಬಂಧದ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿದ್ದಂತಿತ್ತು. ನಿಮ್ಮ ಮತ್ತು ಕೃಷ್ಣಪ್ಪರ ಸಂಬಂಧ ಎಂಥದ್ದು? ಸತ್ಯ ಹೇಳಿ, ನಿಮಗೇನೂ ತೊಂದರೆಯಾಗುವುದಿಲ್ಲ ಎಂದು ಸಾವಿತ್ರಿಯನ್ನು ಬಾರಿ, ಬಾರಿ ಪ್ರಶ್ನಿಸಿದರು.

ಕೃಷ್ಣಪ್ಪ ಹಸುಗೆ ಸಾಲ ಕೊಟ್ಟಿದ್ದಲ್ಲದೆ, ಹುಷಾರಿಲ್ಲದಾಗ ಡಾಕ್ಟರನ್ನು ಕರೆದುಕೊಂಡು ಬಂದಿದ್ದಾರೆ. ಹಸು ಸತ್ತಾಗ ಅಯ್ನೋರ ಹತ್ತಿರ ಮಾತಾಡಿ ಇನ್ನೊಂದು ಹಸುವನ್ನೂ ಕೊಡಿಸಿದ್ದಾರೆ. ಇವನ್ನೆಲ್ಲಾ ಸುಮ್ಮನೇ ಮಾಡಿದ್ದಾರೆಯೇ? ನೀವು ಲೇಸಿಯಾಗಿ ಎಷ್ಟು ವರ್ಷ ಆಯಿತು? ಎಷ್ಟು ಮಕ್ಕಳು? ಈಗ ನಿಮ್ಮನ್ನು ಯಾರು ನೋಡಿಕೊಳ್ತಾರೆ? ಮುಂತಾದ ಪ್ರಶ್ನೆಗಳನ್ನು ಕೇಳಿದರು. ಒಂದು ಸಂದರ್ಭದಲ್ಲಿ ಅಸೋಸಿಯೇಶನ್ ಕಾರ್ಯದರ್ಶಿ ರೋಸಿ ಹೋಗಿ ವೈಯಕ್ತಿಕ ಪ್ರಶ್ನೆಗಳನ್ನು ಕೇಳುವಂತಿಲ್ಲ ಎಂದು ಎಚ್ಚರಿಸಬೇಕಾಯಿತು. ಸಾವಿತ್ರಿ ತಲೆ ತಗ್ಗಿಸಿ, ಸೆರಗಿನ ಅಂಚನ್ನು ಕಚ್ಚಿಕೊಳ್ಳುತ್ತಾ ಉತ್ತರಿಸಲು ಯತ್ನಿಸುತ್ತಿದ್ದಳು. ಕೃಷ್ಣಪ್ಪ ಹಣ ಕೊಟ್ಟಿದ್ದನ್ನು, ಮಗಳು ಬರೆದುಕೊಟ್ಟಿದ್ದನ್ನು ಒಪ್ಪಿದಳು. ಕೃಷ್ಣಪ್ಪ ಹಣ ಕೊಡಲು ಏನು ಕಾರಣ? ನಿಮ್ಮ ಮನೆಗೆ ಆಗಾಗ ಬರುತ್ತಿದ್ದರೇ? ತನಿಖಾಧಿಕಾರಿ ಮತ್ತೆ, ಮತ್ತೆ ಪ್ರಶ್ನಿಸಿದರು. ಸಾವಿತ್ರಿಗೆ ಅಳು ಬರುವಂತಾಗಿ ಗಂಟಲು ಕಟ್ಟಿಕೊಂಡಿತು.

ಸಾವಿತ್ರಿ ಒತ್ತರಿಸಿ ಬರುತ್ತಿದ್ದ ಕಣ್ಣೀರನ್ನು ತಡೆಯಲು ಕಷ್ಟ ಪಡುತ್ತಿರುವುದನ್ನು ತನಿಖಾಧಿಕಾರಿ ಗಮನಿಸಿದರು. ಪ್ರಶ್ನೋತ್ತರವನ್ನು ನಿಲ್ಲಿಸಲು ಹೇಳಿ ಆಕೆಯ ವಿಚಾರಣೆಯನ್ನು ಮುಕ್ತಾಯಗೊಳಿಸಿದರು. ವಿಚಾರಣೆಯ ಕೊನೆಯ ಭಾಗವಾಗಿ ಕೃಷ್ಣಪ್ಪ ಹೇಳಿಕೆ ನೀಡಬೇಕಿತ್ತು. ಊಟದ ಸಮಯವಾಗಿತ್ತು. ವಿಚಾರಣಾಧಿಕಾರಿ ಕೃಷ್ಣಪ್ಪನವರನ್ನು ಈಗಲೇ ಹೇಳಿಕೆ ನೀಡುತ್ತೀರಾ, ಅಮೇಲಾ ಎಂದು ಪ್ರಶ್ನಿಸಿದರು.

ಕೃಷ್ಣಪ್ಪ ಯೋಚನೆ ಮಾಡುತ್ತಿದ್ದರು. ಹೇಳಲೇನೂ ಉಳಿದಿರಲಿಲ್ಲ. ಟ್ರಾನ್ಸ್‌ಫರ್ ಆಗುವುದಂತೂ ಖಚಿತವಾಗಿತ್ತು. ಹೆಚ್ಚೆಂದರೆ ಸೌಲಭ್ಯಗಳು ಕಡಿಮೆ ಇರುವ ದೂರದ ಊರಿಗೆ ವರ್ಗವಾಗಬಹುದು. ಅದೇನೂ ಚಿಂತೆಯ ವಿಷಯವಲ್ಲ. ಬ್ಯಾಂಕಿಗೆ ಸೇರಿದ ಮೇಲೆ ಬ್ಯಾಂಕ್ ನಿರ್ದೇಶಿಸಿದ ಸ್ಥಳಕ್ಕೆ ಹೋಗಲೇಬೇಕು. ಒಂದೆರಡು ಇನ್‌ಕ್ರಿಮೆಂಟ್ ಆರು ತಿಂಗಳಿಗೋ, ವರ್ಷಕ್ಕೋ ತಡೆ ಹಿಡಿಯಬಹುದು. ಇದರಿಂದ ತೊಂದರೆಯಾಗುವುದು ನಿಜ. ಅದಕ್ಕಿಂತಲೂ ಸಾವಿತ್ರಿಯನ್ನು ವಿಚಾರಣೆ ಮಾಡಿದ ರೀತಿಯಿಂದ ಅವರಿಗೆ ನೋವಾಗಿತ್ತು. ಬಣ್ಣದ ನೀರು ತುಂಬಿದ ಹೊಂಡದ ಸುತ್ತ ಕೇಕೆ ಹಾಕುತ್ತಾ ಕುಣಿಯುವುದನ್ನು ಕಂಡಂತಾಗಿತ್ತು!

ಇದು ಇಲ್ಲಿಗೇ ಮುಗಿಯಲಾರದು! ತಮ್ಮಿಬ್ಬರ ಸಂಬಂಧದ ಕುರಿತು ರಂಗುರಂಗಿನ ಕಥೆಗಳನ್ನು ಕಟ್ಟುತ್ತಾರೆ. ಅಟೆಂಡರ್ ರಾಜು ಹಿಂದಿನ ಮ್ಯಾನೇಜರ್ ಒಬ್ಬರ ಸಂಬಂಧದ ಕುರಿತು ಹೇಳಿದಂತೆ ಇದೂ ಚಪ್ಪರಿಸುವ ವಿಷಯವಾಗುತ್ತದೆ... ಯೋಚನೆ ಮಾಡುತ್ತಿದ್ದ ಕೃಷ್ಣಪ್ಪಗೆ ಹೇಳಿಕೆ ಕೊಟ್ಟರೆಷ್ಟು ಬಿಟ್ಟರೆಷ್ಟು ಅನ್ನಿಸಿತು. ಆದರೆ ವಿಚಾರಣೆ ಪೂರ್ಣವಾಗಲು ಹೇಳಿಕೆ ನೀಡಲೇಬೇಕಿತ್ತು. ಕೃಷ್ಣಪ್ಪ ಹೇಳಿಕೆ ಕೊಡಲು ಸಿದ್ಧರಾದರು. ಅಷ್ಟರಲ್ಲಿ ಹುಡುಗಿ ಕೊಠಡಿಯ ಬಾಗಿಲು ತೆರೆದು ಒಳ ಬಂದಳು.

'ಯಾರಮ್ಮಾ ನೀನು?' ವಿಚಾರಣಾಧಿಕಾರಿ ಕೇಳಿದರು. 'ಲೇಸಿಯ ಮಗಳು' ದಿಟ್ಟವಾಗಿ ಹೇಳಿ ಹುಡುಗಿ ನೇರವಾಗಿ ಕೃಷ್ಣಪ್ಪನವರ ಬಳಿಗೆ ಬಂದಳು.

'ನಾವು ಊರಿಗೆ ಹೋಗುತ್ತಿದ್ದೇವೆ. ಬನ್ನಿ ಅಂಕಲ್ ಮನೆಗೆ' ಕೃಷ್ಣಪ್ಪ ಅವಳನ್ನು ಅಭಿಮಾನದಿಂದ ನೋಡಿದರು. ಅವರ ಮುಖದಲ್ಲಿ ನಸು ನಗೆ ಮೂಡಿತು.

●